## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 43 |
| **ಸದಸ್ಯರ ಹೆಸರು** | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 27.01.2025 |
| **ಉತ್ತರಿಸುವ ಸಚಿವರು** | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪರವಾನಿಗೆ ಪಡೆದು ನಡೆಸುತ್ತಿರುವ ಗಣಿಗಾರಿಕೆಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ ಮುಖ್ಯ ಖನಿಜ ಮತ್ತು ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಗಣಿ ಕಾರ್ಯ ನಡೆಸುತ್ತಿರುವ ಗುತ್ತಿಗೆಗಳ ವಿವರ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ಖನಿಜಗಳ ವಿಧ</th><th>ಮಂಜೂರಾದ ಒಟ್ಟು ಗುತ್ತಿಗೆಗಳ ಸಂಖ್ಯೆ</th><th>ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆಗಳ ಸಂಖ್ಯೆ</th></tr>
<tr><td>1</td><td>ಮುಖ್ಯ ಖನಿಜ</td><td>245</td><td>105</td></tr>
<tr><td>2</td><td>ನಿರ್ದಿಷ್ಟ ಉಪಖನಿಜ</td><td>733</td><td>414</td></tr>
<tr><td>3</td><td>ನಿರ್ದಿಷ್ಟವಲ್ಲದ ಉಪಖನಿಜ</td><td>3286</td><td>2483</td></tr>
</table>
</td></tr>
<tr><td>ಆ)</td><td>ಗಣಿಗಾರಿಕೆಗೆ ಪರವಾನಿಗೆ ಪಡೆಯಲು ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳೇನು; ಈ ಮಾನದಂಡಗಳಿಗೆ ಅನುಸಾರವಾಗಿ ಎಲ್ಲಾ ಗಣಿಗಾರಿಕೆಗಳಿಗೆ ಪರವಾನಗಿ ನೀಡಲಾಗಿದೆಯೇ;</td><td>• ಮುಖ್ಯ ಖನಿಜಗಳ ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 10(B) ರಡಿಯಲ್ಲಿ ಹರಾಜು ಮೂಲಕ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 11 ರಡಿಯಲ್ಲಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ನ್ನು ಸದರಿ ಕಾಯ್ದೆಯಡಿಯಲ್ಲಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015 ಮತ್ತು Mineral (Other Than Atomic and Hydro Carbons Energy Minerals) Concession Rules 2016 ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br>• ಎಂ.ಎಂ. (ಡಿ & ಆರ್) 1957 ರ ಸೆಕ್ಷನ್-15 ರಂತೆ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನಿಯಂತ್ರಣ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳಂತೆ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಪಡೆಯಲು ಸಂಬಂಧಪಟ್ಟ ಪ್ರಾಧಿಕಾರಿಗಳ ನಿರಾಪೇಕ್ಷಣಾ ಪತ್ರವನ್ನು ಪಡೆದ ನಂತರ ಪರಿಶೀಲಿಸಿ ಗುತ್ತಿಗೆ / ಲೈಸನ್ಸ್ ಮಂಜೂರು ಮಾಡಲಾಗುತ್ತದೆ.<br>• ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುರುತಿಸಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರ ಅಧಿಸೂಚನೆ ಜಾರಿ ಮಾಡಬೇಕಾಗಿರುತ್ತದೆ. ನಂತರ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಗುರುತಿಸಿರುವ ಉಪಖನಿಜದ</td></tr>
</table>

| | | |
|---|---|---|
| | | ನಿಕ್ಷೇಪದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಂಡು ನಿರ್ಧಿಷ್ಟ ಉಪಖನಿಜಗಳಿಗೆ ಸರ್ಕಾರದಿಂದ ಮತ್ತು ನಿರ್ಧಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದಂತೆ ನಿರ್ದೇಶಕರಿಂದ ಬಿಡ್ ಸ್ವೀಕರಿಸಿಕೊಂಡ ನಂತರ ಯಶಸ್ವಿ ಬಿಡ್ ದಾರರಿಂದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತದೆ.<br>• ದಿ:17-03-2023 ರಂದು ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ನ್ನು ಜಾರಿಗೆ ತಂದಿದ್ದು, ದಿ:12-08-2016ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗಿದ್ದು, ಸದರಿ ಅರ್ಜಿಗಳ ಪ್ರದೇಶಕ್ಕೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದ ನಂತರ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ನಿಯಮಾನುಸಾರ ಕ್ರಮವಹಿಸಲಾಗುತ್ತದೆ.<br>• ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ.<br>• ಗಣಿಗುತ್ತಿಗೆಗಳನ್ನು **Mineral (Other Than Atomic and Hydro Carbons Energy Minerals) Concession Rules 2016** ರ **Schedule-VII** ರಂತೆ ಮತ್ತು ಕಲ್ಲುಗಣಿ ಗುತ್ತಿಗೆಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಮೂನೆ-ಇ ರಲ್ಲಿನ ಗುತ್ತಿಗೆ ಕರಾರು, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೀಡಲಾಗುತ್ತಿದೆ. |
| ಇ) | ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಗಣಿ ಕೈಗಾರಿಕೆ ಕೈಗೊಂಡಿರುವವರ ಸಂಖ್ಯೆ ಎಷ್ಟು; ಇವುಗಳಲ್ಲಿ ಅನಧಿಕೃತ ಗಣಿಗಾರಿಕೆಗಳ ಸಂಖ್ಯೆ ಎಷ್ಟು; | ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಮಂಜೂರು ಮಾಡಿರುವ ಮುಖ್ಯ ಖನಿಜ ಮತ್ತು ಉಪಖನಿಜ ಗಣಿ ಗುತ್ತಿಗೆಗಳ ವಿವರ ಕೆಳಕಂಡಂತಿದೆ:-<br><br>ಜಿಲ್ಲೆ / ಮುಖ್ಯ ಖನಿಜ ಗಣಿ ಗುತ್ತಿಗೆಗಳ ಸಂಖ್ಯೆ / ಉಪಖನಿಜ ಗಣಿ ಗುತ್ತಿಗೆಗಳ ಸಂಖ್ಯೆ<br>ತುಮಕೂರು / 09 / 211<br>ಚಿತ್ರದುರ್ಗ / 35 / 94<br>ಚಿಕ್ಕಬಳ್ಳಾಪುರ / 0 / 201<br>ಕೋಲಾರ / 01 / 118<br><br>ಕಳೆದ 02 ವರ್ಷಗಳಲ್ಲಿ ಅನಧಿಕೃತ ಉಪಖನಿಜ ಗಣಿಗಾರಿಕೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅನಧಿಕೃತ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ:- |

**2023-24**

| ಜಿಲ್ಲೆ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|
| ತುಮಕೂರು | 18 | 10.08 | 9 |
| ಚಿತ್ರದುರ್ಗ | 17 | 14.38 | 7 |
| ಚಿಕ್ಕಬಳ್ಳಾಪುರ | 9 | 11.64 | 2 |
| ಕೋಲಾರ | 28 | 25.04 | 1 |
| **ಒಟ್ಟು** | **72** | **61.14** | **19** |

**2024-25**

| ಜಿಲ್ಲೆ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|
| ತುಮಕೂರು | 20 | 22.13 | 4 |
| ಚಿತ್ರದುರ್ಗ | 14 | 10.00 | 9 |
| ಚಿಕ್ಕಬಳ್ಳಾಪುರ | 9 | 4.55 | 2 |
| ಕೋಲಾರ | 20 | 8.06 | 10 |
| **ಒಟ್ಟು** | **63** | **44.74** | **25** |

| | | |
|---|---|---|
| ಈ) | ಗಣಿಗಾರಿಕೆಗೆ ಪರವಾನಿಗೆ ನೀಡುವ ಸಂದರ್ಭದಲ್ಲಿ ಅತೀ ಹಿಂದುಳಿದ ಪ್ರವರ್ಗ ಒಂದರ ಜಾತಿಗಳ ಎಷ್ಟು ಜನ ಗುತ್ತಿಗೆದಾರರಿಗೆ ಗಣಿಗಾರಿಕೆಗೆ ಪರವಾನಗಿ ನೀಡಲಾಗಿದೆ; ನೀಡದೇ ಇದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು? | • ಮುಖ್ಯ ಖನಿಜಗಳ ಸಂಬಂಧ ಎಂ. ಎಂ (ಡಿ&ಆರ್) ಕಾಯ್ದೆ-1957 ಭಾರತ ಸರ್ಕಾರದಿಂದ ರೂಪಿಸಲ್ಪಟ್ಟಿದ್ದು, ಸದರಿ ಕಾಯ್ದೆಯಂತೆ ಮುಖ್ಯ ಖನಿಜದ ಗಣಿಗುತ್ತಿಗೆ ಮಂಜೂರಾತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಿರುವುದಿಲ್ಲ.<br>• ದಿ:12-08-2016ರ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು- 2016ರಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಯನ್ನು ಟೆಂಡರ್ ಕಂ ಹರಾಜು ಮೂಲಕ ಮೀಸಲಾತಿ ನಿಗಧಿಪಡಿಸಿ ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಮುಂದುವರೆದು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-F ರಂತೆ ಅನುಸೂಚಿತ ಜಾತಿ / ಪಂಗಡ, ಪಾರಂಪರಿಕವಾಗಿ ಕಲ್ಲುಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿರುವ ವ್ಯಕ್ತಿಗಳು/ನೋಂದಾಯಿತ ಸಂಘ ಸಂಸ್ಥೆಗಳು ಹಾಗೂ ಆರ್ಥಿಕ ದುರ್ಬಲ ವರ್ಗದವರಿಗೆ ಹರಾಜು ರಹಿತವಾಗಿ ಕಟ್ಟಡ ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರತ್ಯೇಕವಾಗಿ ಪ್ರವರ್ಗ-I ವರ್ಗದವರಿಗೆ ಕಲ್ಲುಗಣಿಗಾರಿಕೆಗೆ ಮೀಸಲಾತಿ ಕಲ್ಪಿಸಿರುವುದಿಲ್ಲ. |

ಸಂಖ್ಯೆ:ಸಿಐ-ಎಂಎಂಎಂ/18/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.